ದಿನಾಂಕಃ11-01-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ದಿಃ17-08-2012 ರಂದು ಪಿರ್ಯಾದುದಾರರು ನಮ್ಮ ನೋಟಿಸ್‌ಗೆ ಹಾಜರಾಗಿ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಈಗ ನೋಡುತ್ತಿರುವ ದಾಖಲೆ ಸದರಿ ಪತ್ರ ಆಗಿದ್ದು ಅದರಲ್ಲಿರುವ ಸಹಿ ನನ್ನದು. ಸಾಕ್ಷಿ ಗುರುತಿಸಿರುವ ಪತ್ರವನ್ನು ನಿಪಿ-73 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 73(ಎ ) ಎಂದು ಗುರುತಿಸಲಾಯಿತು. ಅದರಲ್ಲಿ ದಿಃ18-09-2007 ರಲ್ಲಿಯ ಪತ್ರದಲ್ಲಿ ಉಲ್ಲೇಖಿಸಿದಂತೆ ಆರೋಪಿತರಿಗೆ ಬರೆದ ಪತ್ರ ದಿಃ 07-09-2007 ರಂದು ಸುಂದರಬಾಯಿ ಗಾವಡೆ ಇವರು ವ್ಯವಸ್ಥಾಪಕರು , ವರ್ಧಮಾನ ಬ್ಯಾಂಕ್ , ಹುಬ್ಬಳ್ಳಿ ರವರಿಗೆ ಸಾಲ ಮರುಪಾವತಿಗಾಗಿ ಕುರಿತು ಬರೆದುಕೊಟ್ಟ ಪತ್ರವಾಗಿರುತ್ತದೆ . ಈಗ ನೋಡುತ್ತಿರುವ ದಾಖಲೆ ಸದರಿ ದಿಃ 07-09-2007 ರ ಪತ್ರ ಆಗಿರುತ್ತಧೆ ಸಾಕ್ಷಿ ಗುರುತಿಸಿರುವ ಸದರಿ ಪತ್ರವನ್ನು ನಿಪಿ-74 ಎಂದು ಗುರುತಿಸಲಾಯಿತು.

ಅದೇ ರೀತಿ ಆ ಪತ್ರದಲ್ಲಿ ಉಲ್ಲೇಖಿಸಿದ ಅನುಕ್ರಮ ಸಂಖ್ಯೆ.2 ರಲ್ಲಿರುವ ಸಾಲಗಾರರ ಯಾದಿ ಆಗಿದ್ದು . ಈಗ ನೋಡುತ್ತಿರುವ ದಾಖಲೆ ಸದರಿ ಸಾಲಗಾರರ ಯಾದಿ ಆಗಿರುತ್ತದೆ . ಆರೋಪಿ ಪರ ವಕೀಲರು ಸದರಿ ದಾಖಲೆ ಸ್ಥಬಧಪಟ್ಟ ಅಧಿಕಾರಿಗಳು ಸಹಿ ಮತ್ತು ಮೊಹರು ಇರುವುದಿಲ್ಲ ಎಂಬ ಕಾರಣದಿಂದ ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು . ಸದರಿ ದಾಖಲೆಯನ್ನು ಪರಿಶೀಲಿಸಿದಾಗ ಅದರ ಮೇಲೆ ಸುಖೋ ಸೌಹಾರ್ದ ಸಹಕಾರಿ ಬ್ಯಾಂಕ್ ಲಿಮಿಟೆಡ್ , ರಾಣೇಬೆನ್ನೂರು ಶಾಖೆ ರವರ

ಮೊಹರು ಇದ್ದು ಮತ್ತು ಆ ದಾಖಲೆಯನ್ನು ತನಿಖಾಧಿಕಾರಿಯವರಿಂದ ಗುರುತಿಸುತ್ತಿದ್ದ ಕಾರಣ ಆರೋಪಿ ಪರ ವಕೀಲರ ತಕರಾರನ್ನು ತಳ್ಳಿ ಹಾಕಿ ಸಾಕ್ಷಿ ಗುರುತಿಸಿರುವ ಸಾಲಗಾರರ ಯಾದಿಯನ್ನು ನಿಪಿ-75 ಎಂದು ಹಾಗು ಸದರಿ ದಾಖಲೆಯ 2 ನೇ ಪುಟದಲ್ಲಿರುವ ಕ್ರಮ ಸಂಖ್ಯೆ-38 ರಲ್ಲಿರುವ ಶ್ರೀಮತಿ ಎಸ್.ವಿ. ಗಾವಡೆ ರವರ ಉಲ್ಲೇಖವನ್ನು ನಿಪಿ-75(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ಸದರಿ ಪತ್ರದಲ್ಲಿರುವ 3 ಮತ್ತು 4 ನೇ ಉಲ್ಲೇಖದಲಿದ್ದ ಆರೋಪಿತರಿಗೆ ದಿಃ 06-12-2004 ರಂದು , ದಿಃ 26-05-2010 ರಂದು, ದಿಃ 04-09-2010 ರಂದು ನೀಡಿದ ನೋಟಿಸ್ ನ 4 ಅಂಚೆ ಲಕೋಟೆ ಮತ್ತು 4 ಸ್ವೀಕೃತಿ ಪತ್ರ ಗಳು ಆಗಿರುತ್ತವೆ . ಈಗ ನೋಡುತ್ತಿರುವ ದಾಖಲೆ ಗಳು ಸದರಿ 4 Sealed ಲಕೋಟೆಗಳು ಆಗಿದ್ದು ಅವುಳನ್ನು ನಿಪಿ-76 ರಿಂದ ನಿಪಿ-79 ಎಂದು ಗುರುತಿಸಲಾಯಿತು. ಹಾಗು 4 ಸ್ವೀಕೃತಿ ಪತ್ರ ಗಳನ್ನು ನಿಪಿ-80 ರಿಂದ ನಿಪಿ-83 ಎಂದು ಗುರುತಿಸಲಾಯಿತು.

ಅದೇ ರೀತಿ ಸದರಿ ಪತ್ರದಲ್ಲಿರುವ 5 ನೇ ಉಲ್ಲೇಖದಲ್ಲಿರುವ ಜಾವಕ ರಿಜಿಸ್ಟರ ಆಗಿರುತ್ತದೆ . ಈಗ ನೋಡುತ್ತಿರುವ ದಾಖಲೆ ಸದರಿ ಜಾವಕ ರಿಜಿಸ್ಟರನ ದೃಢಿಕೃತ ನಕಲು ಪ್ರತಿ ಆಗಿದ್ದು . ಸಾಕ್ಷಿ ಗುರುತಿಸಿರುವ ಸದರಿ ಜಾವಕ ರಿಜಿಸ್ಟರನ ದೃಢಿಕೃತ ನಕಲು ಪ್ರತಿಯನ್ನು ನಿಪಿ-84 ಎಂದು ಗುರುತಿಸಲಾಯಿತು.

ಅದೇ ರೀತಿ ಸದರಿ ಪತ್ರದಲ್ಲಿರುವ 6 ನೇ ಉಲ್ಲೇಖದಲ್ಲಿರುವ ವರ್ಧಮಾನ ಬ್ಯಾಂಕ್ , ರಾಣೇಬೆನ್ನೂರು ಶಾಖೆಯು ಹುಬ್ಬಳ್ಳಿ ಶಾಖೆಗೆ ವರ್ಗಾವಣೆ ಆಗಿ ಬಂದ ಆದೇಶ ಪ್ರತಿಯ ಝುರಾಕ್ಸ ಪ್ರತಿ ಆಗಿರುತ್ತದೆ .

**(ಮುಂದುವರೆದ ಮುಖ್ಯವಿಚಾರಣೆಗೆ ಎಪಿಪಿ ರವರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ.

ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಲಯ, ರಾಣೇಬೆನ್ನೂರು.**

**ಸಿ . ಸಿ. ನಂಬರಃ 354/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಬಸವರಾಜ ಲಕ್ಷ್ಮೀಶ್ವರ | ಫ್ರಾ.ಸಾ– 12 |
| ತಂದೆಯ ಹೆಸರು | – | ಪುಂಡಲಿಕಪ್ಪ | ಚಾ.ಸಾ– 11 |
| ವಯಸ್ಸು | – | 54 ವರ್ಷ | |
| ಉದ್ಯೋಗ | – | Bond Writer , Ranebennur | |
| ವಾಸ | – | Ranebennur | |

ದಿನಾಂಕಃ11–01–2022 ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ –19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ನಾನು ಸನ್ 1985 ರಿಂದ ಇವತ್ತಿನವರಗೆ ರಾಣೆಬೆನ್ನೂರ ಶಹರದಲ್ಲಿ Bond Writer ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ಈಗ ನೋಡುತ್ತಿರುವ ದಾಖಲೆ ನಿಪಿ–34 ಖರೀದಿ ಪತ್ರವನ್ನು ನಾನು ನ ಮ್ಮ ಕಚೇರಿಯಕಂಪ್ಯೂಟರ್ ನಲ್ಲಿ ಟೈಪ ಮಾಡಿದ ಪತ್ರ ಆಗಿರುತ್ತದೆ . ಸದರಿ ಪತ್ರವನ್ನು ದಿಃ 02–12–2009 ರಂದು ರಾಣೇಬೆನ್ನೂರಿನ ಖರೀದಿ ಕೊಟ್ಟ ಸುಂದರಬಾಯಿ ಪಾಂಡುರಂಗ ಗಾವಡೆ ಮತ್ತು ಖರೀದಿ ಮಾಡಿದ ಪಾಲಾಕ್ಷಪ್ಪ ಬಸಪ್ಪ ಅಂಗಡಿ ಹಾಗು ವೀಣಾ ಪ್ರಮೋದ ಸಾಳುಂಕೆ ರವರು ಹಾಗು 4 ಜನ ಸಾಕ್ಷಿದಾರರು ನನ್ನ ಬಳಿ ಖರೀದಿ ಪತ್ರ ಬರೆಸಲು ಬಂದಿರುತ್ತಾರೆ . ಸದರಿ ಆಸ್ತಿಯು ಮನೆಯಾಗಿದ್ದು ಅದರ ಸಿಟಿಎಸ್ ನಂ.4087 ಮತ್ತು ಕ್ಷೇತ್ರ ಮನೆ ಹಾಗು ಬೈಲು ಜಾಗೆ ಸೇರಿ 76.92 ಚ.ಮೀ ಆಗಿರುತ್ತದೆ .

ಈಗ ನೋಡುತ್ತಿರುವ ನಿಪಿ-34 ನಾನು ಬರೆದುಕೊಟ್ಟ ಖರೀದಿ ಪತ್ರ ಆಗಿರುತ್ತದೆ . ಅದರಲ್ಲಿರುವ ಸಹಿ ನನ್ನದು. (**ಸದರಿ ದಾಖಲೆ ನಿಪಿ-34 ದೃಢಿಕೃತ ಪತ್ರವಿದ್ದ ಕಾರಣ ಸಾಕ್ಷಿಯು ಸಹಿಯನ್ನು ಗುರುತಿಸಿದರೂ ಸಹ ಸಹಿಯನ್ನು ನಿಶಾನೆಯಾಗಿ ಗುರುತಿಸಲು ಆಗಿರುವುದಿಲ್ಲ**). ಸದರಿ ದಾಖಲೆ ಬರೆಯುವಾಗ ನಾನು ಆಸ್ತಿಗೆ ಸಂಬಂಧಪಟ್ಟ ಉತಾರೆಯನ್ನು ನೋಡಿರುತ್ತೇನೆ . ಈಗ ನೋಡುತ್ತಿರುವ ದಾಖಲೆ ನಿಪಿ-65 ಉತಾರೆ ಖರೀದಿ ಪತ್ರದ ಸಮಯದಲ್ಲಿ ನಾನು ನೋಡಿದ ಉತಾರೆ ಆಗಿರುವುದಿಲ್ಲ . ಸದರಿ ಕೇಸಿನ ವಿಚಾರದಲ್ಲಿ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಈ ದಿನ ನಾಯಾಲಯದಿಂದ ಸಮನ್ಸ ಬಂದ ಕಾರಣ ಸಾಕ್ಷಿ ನುಡಿಯಲು ಬಂದಿರುತ್ತೇನೆ . ಸುಂದರಬಾಯಿ ಮತ್ತು ಪಾಲಾಕ್ಷಪ್ಪ ಹಾಗು ಉದಯಗೌಡೆ ರವರನ್ನು ನಾನು ನೋಡಿದರೆ ಗುರುತಿಸಬಲ್ಲೆ.

ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಸದರಿ ಉದಯ ಗೌಡೆ ಆಗಿರುತ್ತಾರೆ. 1 ನೇ ಆರೋಪಿತರು ಈ ದಿನ ಗೈರು ಹಾಜರು ಇದ್ದು ಅವರನ್ನು ನೋಡಿದರೆ ಗುರುತಿಸಬಲ್ಲೆ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ .

ನನಗೆ ಸದರಿ ಆಸ್ತಿ ಕುರಿತು ನ್ಯಾಯಾಲಯದಲ್ಲಿ ಪ್ರಕರಣ ಇದ್ದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಹಾಗು ಆ ಆಸ್ತಿಗೆ ಸಂಬಂಧಪಟ್ಟಂತೆ ಯಾರು ಏನು ಮಾಡಿರುತ್ತಾರೆ ಎಂದು ಗೊತ್ತಿಲ್ಲ ಆದರೆ ನಾನು ಕೇವಲ ಖರೀದಿದಾರರು ಮತ್ತು ಖರೀದಿ ಕೊಟ್ಟವರು ಹೇಳಿದಂತೆ ನಿಪಿ-34 ರಂತೆ ಖರೀದಿ ಪತ್ರ ಮಾತ್ರ ಬರೆದುಕೊಟ್ಟಿರುತ್ತೇನೆ . ಇದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ವಿಚಾರ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು **ಭಾಗಶಃ ಅಂಶಗಳಿಗೆ ಪ್ರತಿಕೂಲ** ಸಾಕ್ಷಿ ಎಂದು ಪರಿಗಣಿಸಿ ಎಪಿಪಿ ಅವರು ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಎಪಿಪಿ ಅವರಿಂದಃ**

ಸುಂದರಬಾಯಿ ಗಾವಡೆ ರವರು The Vardaman Co-operative Bank, Ranebennur ಶಾಖೆಯಲ್ಲಿ ಅವರ ಸಿಟಿಎಸ್ ನಂ.4087 ರಲ್ಲಿದ್ದ ಮನೆಯನ್ನು ಬ್ಯಾಂಕ್ ಗೆ ಭದ್ರತೆಗಾಗಿ D.T.D. ಮಾಡಿಕೊಟ್ಟು ದಾಖಲೆಗಳನ್ನು ಒದಗಿಸಿ ದಿಃ 03-09-2001 ರಂದು ರೂ.3,00,000/- ಸಾಲವನ್ನು ಪಡೆದು , ಆ ಸಾಲವನ್ನು ತೀರಿಸದೇ ಹಣವನ್ನು ಬ್ಯಾಂಕ್ ಗೆ ಮರುಪಾವತಿಸದೇ ದಿಃ 22-06-2009 ರಂದು ಬ್ಯಾಂಕ್ ನ ಸಾಲವನ್ನು ಬಡ್ಡಿಸಮೇತ ಮರುಪಾವತಿಸಿದಂತೆ ಕೊಟ್ಟ D.T.D ಪತ್ರವನ್ನು ಆರೋಪಿತರಾದ ಉದಯ ಗಾವಡೆ ರವರು ಬ್ಯಾಂಕ್ ನ ಅಧಿಕಾರಿಗಳಂತೆ ಕೊಟ್ಟ ಸಹಿ ಮಾಡಿರುತ್ತಾರೆ ಎಂದು ನನಗೆ ವಿಷಯ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ಸದರಿ ಸುಂದರಬಾಯಿ ರವರು The Vardaman Co-operative Bank, Ranebennur ಶಾಖೆಯಿಂದ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡದೇ ಸದರಿ ಬ್ಯಾಂಕ್ ಗೆ ಹಾಗು ಅದನ್ನು ವಿಲೀನಗೊಳಿಸಿಕೊಂಡ ಸುಖೋ ಬ್ಯಾಂಕ್ ಹುಬ್ಬಳ್ಳಿ ರವರಿಗೂ ಸಹ ಮೋಸಗೊಳಿಸಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಅವುಗಳು ನೈಜ ಆಗಿರುವಂತೆ ನಂಬಿಸಿ ಬ್ಯಾಂಕ್ ಗೆ D.T.D ಮಾಡಿದ ಆಸ್ತಿಯನ್ನು ಬ್ಯಾಂಕ್ ನ ಅನುಮತಿ ಇಲ್ಲದೇ ಪಾಲಾಕ್ಷಪ್ಪ ರವರಿಗೆ ನಿಪಿ-34 ರಂತೆ ಮಾರಾಟ ಮಾಡಿದ ಬಗ್ಗೆ ಸುಖೋ ಬ್ಯಾಂಕ್ ವ್ಯವಸ್ಥಾಪಕರಾದ ಚಾಸಾ-1 ರವರು ಪಿರ್ಯಾದು ಕೊಟ್ಟ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದಂತೆ ತನಿಖಾ ಅಧಿಕಾರಿಯವರ ಮುಂದೆ ದಿಃ 10-08-2012 ರಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-72 ಎಂದು ಗುರುತಿಸಲಾಯಿತು. ನಾನು ಪೋಲಿಸರ ಮುಂದೆ ನಿಪಿ-72 ರಂತೆ ಹೇಳಿಕೆ ಕೊಟ್ಟರೂ ಸಹ ಆರೋಪಿತರಿಗೆ

ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲುಃ**

**ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ .**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ.

ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.